Strength of SC/ST population in S. K. District.

101. SRI A. RAMACHANDRA (Sullia).—Will the Minister for Social Welfare and Backward Classes, be pleased to state.—

(a) the total no. of castes among the harijan community in South Kanara district ;

(b) the name of each such castes ;

(c) among them, the no. of untouchables ;

SRI P. VENKATARAMANA (Minister for Social Welfare and Backward Classes).—

(a) In all, there are 19 castes in Harijan community in South Kanara district.

(b) The names of the castes are as follows :

1. Adi-dravida
2. Achila
3. Byra
4. Bakuda
5. Madiga
6. Godda
7. Holeya
8. Koosa
9. Mouila
10. Mogera (Mera)
11. Mukhari
12. Mundala
13. Nalkedaya (Nalkeyara)
14. Pambada
15. Samagara
16. Thoti
17. Raniyura
18. Haslaru
19. Parava

(c) As per the preservation of Citizens Rights Act, the untouchability has been eradicated. Before the commencement of the Preservation of Citizens Rights Act, 1955. the people belonging to other communities naturally treated the pepople belonging to the above mentioned 19 castes as untouchables.

ಶ್ರೀ ಎ ರಾಮಚಂದ್ರ.—ನಾನು ಈ ಪ್ರಶ್ನೆ ಕೇಳಿ ಎರಡು ವರ್ಷ ಆಗಿಹೋಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಿಜನರಲ್ಲಿ ಒಟ್ಟು ಎಷ್ಟು ಜಾತಿಯವರಿದ್ದಾರೆ ಎಂದು ನಾನು ಕೇಳಿದ್ದೇನೆ.

ಅಧ್ಯಕ್ಷರು.—ಉತ್ತರ ಕೊಟ್ಟಿದ್ದಾರೆ.

ಶ್ರೀ ಎ. ರಾಮಚಂದ್ರ,—ಉತ್ತರದಲ್ಲಿ ೧೯ ಎಂದು ಕೊಟ್ಟಿದ್ದಾರೆ. ಇದರಲ್ಲಿ ಒಂದನೆಯದು, ಹನ್ನೊಂದನೆಯದು ಮತ್ತು ಹನ್ನೆರಡನೆಯದು – ಈ ಮೂರೂ ಒಂದೇ ಜಾತಿ, ಒಂದೇ ಜಾತಿಯನ್ನು ಮೂರು ಜಾತಿಯನ್ನಾಗಿ ವಿಂಗಡಣೆ ಮಾಡಿದ್ದಾರೆ. ಅದರೂ ಮೂರು ಜಾತಿಗಳಾಗಿ ಹೇಗೆ ವಿಂಗಡಿಸಿದ್ದಾರೆ ? ಇವರಿಗೆ ಈ ಇನ್‌ಫರ್ಮೇಷನ್ ಹೇಗೆ ಸಿಕ್ಕಿತು ? ಇದನ್ನು ಯಾರು ಒದಗಿಸಿಕೊಟ್ಟರು ಎಂಬುದನ್ನು ದಯಮಾಡಿ ಹೇಳುತ್ತೀರಾ ?

† ಶ್ರೀ ಪಿ. ವೆಂಕಟರಮಣ.—ನಿಮ್ಮ ಪ್ರಶ್ನೆಯನ್ನು ರಿಪೀಟ್ ಮಾಡಿ.

ಶ್ರೀ ಎ. ರಾಮಚಂದ್ರ.—ಹರಿಜನರಲ್ಲಿ ಒಟ್ಟು ೧೯ ಜಾತಿಗಳಿವೆ ಎಂದು ಉತ್ತರದಲ್ಲಿ ಕೊಟ್ಟಿದ್ದೀರಿ. ಇದರ ಜೊತೆಗೆ ಒಂದನೆಯದು ಹನ್ನೊಂದನೆಯದು ಮತ್ತು ಹನ್ನೆರಡನೆಯದು ಈ ಮೂರನ್ನೂ ಬೇರೆ

ಬೇರೆ ಜಾತಿ ಎಂದು ಹೇಳಿದ್ದೀರಿ. ಈ ಮೂರೂ ಒಂದೇ ಜಾತಿ. ಹೆಸರು ಮಾತ್ರ ಬೇರೆ ಬೇರೆ ಕೊಟ್ಟು ಬೇರೆ ಬೇರೆ ಜಾತಿಯವರೆಂದು ತೋರಿಸಿದ್ದಾರೆ. ಆದಿದ್ರಾವಿಡ, ಮುಖಾರಿ, ಮತ್ತು ಮುಂಡಾಲ ಈ ಮೂರೂ ಒಂದೇ ಜಾತಿ. ಆದರೂ ಬೇರೆಬೇರೆಯಾಗಿ ಕೊಟ್ಟಿದ್ದೀರಲ್ಲ, ಈ ಇನ್‌ಫರ್ಮೇಷನ್ ನಿಮಗೆ ಎಲ್ಲಿಂದ ಸಿಕ್ಕಿತು ? ಯಾವ ಅಧಿಕಾರಿ ಕೊಟ್ಟರು ? ಇದು ಯಾವ ಪಟ್ಟಿಯಲ್ಲಿದೆ ಎಂಬುದನ್ನು ತಿಳಿಸಬೇಕು.

ಶ್ರೀ ಪಿ. ವೆಂಕಟರಮಣ.—ಮಾನ್ಯ ಅಧ್ಯಕ್ಷರೆ, ಇದು ಸರ್ಕಾರದ ಹುಕುಂ ಪ್ರಕಾರ ತಯಾರು ಮಾಡಿರತಕ್ಕ ಪಟ್ಟಿ. ಸರ್ಕಾರೀ ಆಜ್ಞೆ ಪ್ರಕಾರ ಕೊಟ್ಟಿರತಕ್ಕ ಹೆಸರುಗಳು.

ಶ್ರೀ ಎ. ರಾಮಚಂದ್ರ.—ನಾನು ಆ ಜಿಲ್ಲೆಯ ಪ್ರತಿನಿಧಿ. ನನಗೆ ಇದು ಗೊತ್ತಿದೆ. ಯಾವ ಯಾವ ಜಾತಿಗೆ ಯಾವ ಯಾವ ಪದರು ಎಂಬುದು ನನಗೆ ಗೊತ್ತು. ಇಲ್ಲಿ ಕೊಟ್ಟಿರುವ ಮೂರು ಜಾತಿಯೂ ಒಂದೇ. ಒಂದು ವೇಳೆ ಆ ರೀತಿ ಬೇರೆ ಬೇರೆ ಹೆಸರುಗಳಿದ್ದರೆ ಅದನ್ನು ತಿದ್ದುಪಡಿ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಪಿ. ವೆಂಕಟರಮಣ.—ಮಾನ್ಯ ಸದಸ್ಯರು ಈ ರೀತಿ ಅಭಿಪ್ರಾಯ ಪಡುವುದಾದರೆ ಜಿಲ್ಲಾಧಿಕಾರಿಗಳಿಂದ ವರದಿ ತರಿಸಿ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎ. ರಾಮಚಂದ್ರ.—ಈಗ ಸರ್ಕಾರೀ ಆಜ್ಞೆ ಪ್ರಕಾರ ಕೊಟ್ಟಿರುವ ಹೆಸರುಗಳು ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಟ್ರಾವನ್ಕೂರ್ ಕಮಿಟಿ ವರದಿ ಪ್ರಕಾರ ಇನ್ನೂ ನಾಲ್ಕು ಜಾತಿಗಳನ್ನು ಸೇರಿಸಿದ್ದಾರೆ. ಅವರು ನಿಜವಾಗಿ ಅಸ್ಪೃಶ್ಯರಲ್ಲ. ಆದರೆ ಅವರ ಹೆಸರನ್ನು ಇಲ್ಲಿ ಕೊಟ್ಟಿಲ್ಲ. ಏತಕ್ಕೆ ಕೊಟ್ಟಿಲ್ಲ ?

ಶ್ರೀ ಪಿ. ವೆಂಕಟರಮಣ.—ಅವರು ಹೇಳುತ್ತಿರುವುದು ಯಾವ ಜಾತಿ ಎಂದು ಹೇಳಿದರೆ ನಾನು ಮಾಹಿತಿ ತರಿಸಿಕೊಡುತ್ತೇನೆ.

ಶ್ರೀ ಎ. ರಾಮಚಂದ್ರ.—ಪರಿಜನರ ಪಟ್ಟಿಯಲ್ಲಿ ಇದೆಯಲ್ಲಾ ಆ ಹೆಸರು.

ಅಧ್ಯಕ್ಷರು.—ರಾಜ್ಯಾಂಗದಲ್ಲಿ ಪರಿಜನರು ಎಂದು ಇರುವುದಿಲ್ಲ. ಷೆಡ್ಯೂಲ್ಡ್ ಕ್ಯಾಸ್ಟ್ ಎಂಬುದರ ಕೆಳಗೆ ಬರುತ್ತದೆ. ಯಾವ ಜಾತಿ ಬಿಟ್ಟುಹೋಗಿದೆ ಎಂಬುದನ್ನು ಹೇಳಿದರೆ ವಿಚಾರ ಮಾಡುತ್ತಾರೆ.

ಶ್ರೀ ಎ. ರಾಮಚಂದ್ರ.—ಬೇರೆ ಜಾತಿಯವರನ್ನು ಷೆಡ್ಯೂಲ್ಡ್ ಕ್ಯಾಸ್ಟ್ ಪಟ್ಟಿಗೆ ಸೇರಿಸಿದ್ದಾರೆ. ಮಾನ್ಯ ಮಂತ್ರಿಗಳಿಗೆ ಅದು ಯಾವುದು ಎಂಬುದು ಗೊತ್ತಿಲ್ಲದಿದ್ದರೆ ನಾನು ಹೇಳುತ್ತೇನೆ.

ಶ್ರೀ ಪಿ. ವೆಂಕಟರಮಣ.—ಕೋಟೆಗಾರ ಜಾತಿ ಎಂಬುವಿದೆ. ೧೯೫೦ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಷೆಡ್ಯೂಲ್ ಕ್ಯಾಸ್ಟ್ ಪಟ್ಟಿಯಲ್ಲಿ ಇದಿತ್ತು. ೧೯೭೬ರಲ್ಲಿ ಇದು ಆಮೆಂಡ್ ಆಯಿತು. ಏರಿಯಾ ರಿಸ್ಟ್ರಿಕ್ಷನ್ ತೆಗೆದಮೇಲೆ ಆಲ್ ಓವರ್ ದಿ ಸ್ಟೇಟ್ ಎಂದಾಯಿತು. ೧೯೫೦-೧೯೭೯ರಲ್ಲಿ ಕೋಟೆಗಾರ ಮತ್ತು ಮೇಟಿ ಎಂಬುದನ್ನು ಬಿಟ್ಟು ನಿನೋನಿಮ್ಸ್ ಎಂದು ಹೆಸರನ್ನು ಸೇರಿಸಿದ್ದಾರೆ. ಕೋಟೆ ಕ್ಷತ್ರಿಯ ಮತ್ತು ಕೋಟೆಗಾರ ಎಂಬುದನ್ನು ಬ್ಯಾಕ್‌ವರ್ಡ್ ಕ್ಲಾಸ್ ಮಾಡಿದ್ದಾರೆ.

SRI C. M. ARUMUGHAM.—In Mangalore a number of non-scheduled castes are included in the list of Scheduled castes this year. What was the criterion for including them ? Whether the Government of Karnataka recommended the Central Government to include those castes in the list of scheduled castes ?

ಶ್ರೀ ಪಿ. ವೆಂಕಟರಮಣ.— ಕರ್ನಾಟಕ ಸರ್ಕಾರ ಶಿಫಾರಸ್ಸು ಮಾಡಿಕಳುಹಿಸಿದ ಮೇಲೆ ಭಾರತ ಸರ್ಕಾರದವರು ರೆಕಗ್ನೈಜ್ ಮಾಡತಕ್ಕದ್ದು. ಅವರು ನೋಟಿಫಿಕೇಷನ್ ಕಳುಹಿಸಿದಮೇಲೆ, ನಾವು ನೋಟಿಫಿಕೇಷನ್ ಇಸ್ಯೂ ಮಾಡಿ, ಇಂತಿಂಥ ಜಾತಿಗಳನ್ನು ಸೇರಿಸಿದೆ ಎಂದು ನಿರ್ಧಾರ ಮಾಡತಕ್ಕದ್ದು.

SRI C. M. ARUMUGHAM.— I am asking a specific question. Whether the Government of Karnataka recommended to the Central

Government for the inclusion ? The Central Government cannot put it unless the State Government recommends. I am asking who recommended. for it ? What was the basis for the Government of Karnataka to include these non-scheduled castes in the list of scheduled castes ?

SRI P. VENKATARAMANA .— I want notice.

SRI C. M. ARUMUGHAM .— I agree you require a notice. But you should be the master of the subject. You should know how it has been included. You cannot ask notice. Even before becoming a Minister you were General Secretary of Congress i, you were Taluk Board Member for 10 years and A. I C. C. Member for severel years.

MR. SPEAKER .—Please come to the point. They are not relevant. We are not concerned about what the Hon. Minister was formerly.....

SRI C. M. ARUMUGHAM .— Tell me the relevance. I am asking, even otherwise, if he were not a Minister, he must know. Alright I will send a notice.

ಶ್ರೀ ಪಿ. ವೆಂಕಟರಮಣ .— ಅಧ್ಯಕ್ಷರೇ, ಮಾನ್ಯ ಸದಸ್ಯರು ನೋಟೀಸ್ ಕಳುಹಿಸಿದರೆ, ನಾನು ಉತ್ತರ ಒದಗಿಸುತ್ತೇನೆ.

SRI C. M. ARUMUGHAM .— We must put supplementaries on that list. I am only asking some of these castes which have been included this year, they have taken all the seats in Medical and Engineering Colleges.

SRI P. VENKATARAMANA . — This is a question pertaining to South Kanara District.

MR. SPEAKER—The hon. Member is puting the question in respect of South Kanara District,

SRI P VENKATARAMANA .— If the hon. Member puts a separate question, I will certainly answer.

SRI C. M. ARUMUGHAM .— Alright, if he wants a notice, we can give it. But this is a very important issue. Of cource, I know the mind of Sri Ramachandra. They are not going to ask who are those scheduled castes. Why should we ask it ? There may be so many.

ಶ್ರೀ ಐ. ಪಿ. ಡಿ. ಸಾಲಪ್ಪ .— ಮಾನ್ಯ ಸದಸ್ಯರಾದ ರಾಮಚಂದ್ರ ಅವರು (೧) ಪ್ರಶ್ನೆಯಲ್ಲಿ ಈ ಪೈಕಿ ಅಸ್ಪೃಶ್ಯರು ಎಷ್ಟು ಮಂದಿ ಇದ್ದಾರೆಂದು ಕೇಳಿದ್ದಾರೆ. ಸ್ವಾಮಿ, ನನಗೆ ಗೊತ್ತಿರುವ ಹಾಗೆ ನಾನು ಪೌರಕಾರ್ಮಿಕರ ಸಮಿತಿ ಅಧ್ಯಕ್ಷನಾಗಿ ಆ ಭಾಗದಲ್ಲಿ ಪ್ರವಾಸ ಮಾಡಿದಾಗ ಪೌರ ಕಾರ್ಮಿಕರ ಕೆಲಸ ಮಾಡತಕ್ಕ ಕೊರವರು ಅಸ್ಪೃಶ್ಯರಾಗಿದ್ದರೂ ಕೂಡ ಇವರನ್ನು ಬಿಟ್ಟಿದ್ದಾರೆ ಕಾರಣ ಏನು ? ಅಲ್ಲದೆ, ೧೦ನೇ ಸಂಖ್ಯೆಯಲ್ಲಿರುವ ಮೊಗೇರ ಜಾತಿಯವರು ಅಸ್ಪೃಶ್ಯರಲ್ಲದಿದ್ದರೂ ಅವರನ್ನು ಪಟ್ಟಿಯಲ್ಲಿ ಸೇರಿಸಿದ್ದಾರೆ. ಇದಕ್ಕೆ ಕಾರಣವೇನು ತಿಳಿಸುತ್ತೀರಾ ?

ಶ್ರೀ ಪಿ. ವೆಂಕಟರಮಣ .— ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡಲಾಗುವುದು.

ಶ್ರೀ ಎ. ರಾಮಚಂದ್ರ .— ಮಾನ್ಯ ಸದಸ್ಯರಾದ ಅಲಕ್ಷ್ಮಪ್ಪನವರು ತಿಳಿಸಿದ ಜಾತಿ ಗಿರಿಜನರ ಪಂಗಡಕ್ಕೆ ಬರುತ್ತದೆ. ಮಾನ್ಯ ಮಂತ್ರಿಗಳಿಗೆ ಕರೆಯಾಗಿ ಹೇಳಲಿಕ್ಕೆ ಬರಲಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊರವರನ್ನು ಪರಿಜನರು ಎಂದು ಕರೆಯುತ್ತಾರೆ. ಬೇಗೆಯರು ಬೆಸ್ತರು ಇದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿರತಕ್ಕ ಬೆಸ್ತರು ಪರಿಜನರು, ಇದು ಸರ್ಕಾರದ ಗಮನಕ್ಕೆ ಬಂದಿಲ್ಲ. ಮುಂದಿಟ್ಟು ವಿಚಾರ ಮಾಡಿ ನೋಡಿ. ಆದರೆ ನಮ್ಮ ಜಿಲ್ಲೆಯಲ್ಲಿರುವ ಬೆಸ್ತರು ಪರಿಜನರಾಗುವುದಿಲ್ಲ. ಇದರ ಬಗ್ಗೆ ಸ್ವಲ್ಪ ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ವೆಂಕಟರಮಣ .— ಸಕಾಲದಲ್ಲಿ ಪರಿಶೀಲಿಸಲಾಗುವುದು.

Elections of Agriculture Marketing Committee Chamarajanagar

288 SRI M. C. BASAPPA (Chamarajanagar) .—Will the Minister of State for Marketing and Muzarai be pleased to state .—

(a) whether it has come to the notice of Government that the term of Agricultural Produce Marketing Committee, Chamarajanagar is nearing completion ;

(b) if so, the reasons for not conducting elections in time ;

(c) when the elections will be conducted ?

SRI SUDHENDRA RAO KASBE .—(Minister of State for Marketing and Muzarai).—

(a) Yes.

(b) Action had been taken for conducting elections to the Agricultural Produce Marketing Committee, Chamarajanagar. But the elections for the Agricultural Produce Marketing Committe, Chamarajanagar has been postponed thinking that there will be problems of maintenance of Law and Order in view of the continuous farmers agitation throghout the State and free and fair elections cannot be conducted.

(c) Elections will be conducted very soon.

ಶ್ರೀ ಬಿ.ಸಿ. ಬಸಪ್ಪ .—ಸ್ವಾಮಿ, ನನ್ನ (ಆ) ಪ್ರಶ್ನೆಗೆ ಉತ್ತರವಾಗಿ ಚುನಾವಣೆ ನಡೆಸುವುದಕ್ಕೆ ರೈತರ ಚಳುವಳಿ ನಡೆಯುತ್ತಿತ್ತು, ಕಾನೂನು ವ್ಯವಸ್ಥೆಗೆ ಧಕ್ಕೆ ಬರಬಹುದೆಂದು ಮುಕ್ತ ಮತ್ತು ನ್ಯಾಯುಬ್ಧ ಚುನಾವಣೆಯನ್ನು ನಡೆಸಲು ಸಾಧ್ಯವಾಗದೆ ಇರಬಹುದೆಂತಲೂ ಚುನಾವಣೆಯನ್ನ ಮುಂದೂಡಲಾಯಿತೆಂದು ತಿಳಿಸಿದ್ದೀರಿ, ರಾಜ್ಯದಲ್ಲಿ ಈಗ ಸನ್ನಿವೇಶ ಹೇಗಿದೆ ತಿಳಿಸುತ್ತೀರಾ ?

ಶ್ರೀ ಸುಧೀಂದ್ರರಾವ್ ಕಸಬೆ .—ಅಧ್ಯಕ್ಷರೇ, ಈಗ ರಾಜ್ಯದಲ್ಲಿ ಜನಗಣತಿ ಕೆಲಸ ನಡೆಯುತ್ತಿದ್ದು ಕೆಲವು ಭಾಗ ಬರಗಾಲ್ಯ ಬಳಗಾಗಿರುವುದರಿಂದ ಈ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಆದಷ್ಟು ಬೇಗ ಚುನಾವಣೆ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಬಿ.ಸಿ. ಬಸಪ್ಪ .—ಸ್ವಾಮಿ, ಜನಗಣತಿ ಕೆಲಸ ಇನ್ನೂ ತಾರೀಖು ಮುಗಿದು ಹೋಯಿತೆಂದು ಮಾನ್ಯ ಮಂತ್ರಿಗಳಿಗೆ ಹೇಳುವುದಕ್ಕೆ ಬಯಸುತ್ತೇನೆ. ಇನ್ನು ವಿದ್ಯಾರ್ಥಿ ಟ್ಯಾಬುಲೇಷನ್ ಕೆಲಸ ಆರನ್ನು ಸೆನ್ಸಸ್ ಆಫೀಸರ್ ಕೂತುಕೊಂಡು ಮಾಡಿಕೊಳ್ಳುತ್ತಾರೆ. ಚುನಾವಣೆಗೂ ಜನಗಣತಿಗೂ ಸಂಬಂಧ ಇಲ್ಲ. ಚುನಾವಣೆ ಮಾಡುವುದಕ್ಕೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೆ ?